

ಮಣಿಪುರ ದೇವತೆಯ ದೇಗುಲ




**ಮಾತೃಚೈತನ್ಯ ಮತ್ತು ಪ್ರಾಕೃತಿಕ ಸೌಂದರ್ಯದ ಪ್ರತೀಕದಂತೆ ಕಾಣಿಸುವ ಮಣಿಪುರ ರಾಜ್ಯ ತನ್ನ ಸಾಂಸ್ಕೃತಿಕ ಬಹುತ್ವದಿಂದ ಸಹೃದಯರ ಗಮನಸೆಳೆಯುತ್ತದೆ. ವಿವಿಧ ಸಂಘರ್ಷಗಳಿಂದ ಈ ಪುಟ್ಟ ರಾಜ್ಯ ತತ್ತರಿಸುತ್ತಿದ್ದರೂ, ಆ ಸಂಘರ್ಷದ ಕಾವನ್ನು ಮರೆಸುವಷ್ಟು ಅಪೂರ್ವ ಸಾಂಸ್ಕೃತಿಕ ಚೈತನ್ಯ ಅಲ್ಲಿನ ಮಣ್ಣಿಗಿದೆ.**

ಮಹಾಭಾರತದ ಬಭ್ರುವಾಹನನ ತಾಯಿ ಚಿತ್ರಾಂಗದೆಯ ನಾಡು ಎಂಬ ನಂಬಿಕೆಗೆ ಇಂಬುಕೊಡುವಂತೆ, ಬೆನ್ನಲ್ಲಿ ಮಗುವನ್ನು ಕಟ್ಟಿಕೊಂಡು ನಗುನಗುತ್ತಾ ಹಣ್ಣುಗಳನ್ನು ಮಾರುತ್ತಿದ್ದ ದಿಟ್ಟ ಮನೋಭಾವದ, ಗಟ್ಟಿ ದೇಹಬಲದ ಮಹಿಳೆಯರು ದಾರಿಯಲ್ಲಿ ಕಾಣಸಿಕ್ಕರು. ಬೆಳಿಗ್ಗೆ ಆರು ಗಂಟೆಗೆ ಹೊರಟಿದ್ದ ನಾವು ಇಂಫಾಲ ತಲುಪುವಾಗ ರಾತ್ರಿ ಎಂಟು ಗಂಟೆ. ಸಂಜೆ ನಾಲ್ಕಕ್ಕೆಲ್ಲ ಸೂರ್ಯ ಕೆಂಪಾಗುವ ನಾಡಲ್ಲಿ ಇಂಫಾಲ ನಗರದ ಅಂಗಡಿ ಸಾಲುಗಳಲ್ಲಿ ಮರಿರಾಣಿಯರಂತೆ ಕುಳಿತು ವ್ಯಾಪಾರ ನಿರ್ವಹಿಸುತ್ತಿದ್ದ ಚಿತ್ರಾಂಗದೆಯರನ್ನು ಬೆರಗಿನಿಂದ ನೋಡುತ್ತಾ ಬಂದೆವು.

### ಸ್ತ್ರೀ ಚೈತನ್ಯದ ಸಾಕಾರ

'ಮಣಿಪುರ' ಎಂದರೆ ಅದು ಸ್ತ್ರೀ ಶಕ್ತಿ ಚೈತನ್ಯದ ಅಪರಾವತಾರವೇ ಸೈ. ಬುಡಕಟ್ಟು ಸಂಸ್ಕೃತಿ ಪ್ರಧಾನವಾದ ಈ ರಾಜ್ಯದಲ್ಲಿ ಮೈಥೇಯಿ, ಕುಕಿ, ನಾಗಾ ಮುಂತಾದ ಜನಾಂಗದವರಲ್ಲಿ ಪ್ರಧಾನರಾದ ಮೈಥೇಯಿಗಳು ಶೇ. 55ರಷ್ಟಿದ್ದಾರೆ. ಇಲ್ಲಿನದು ಮಾತೃಪ್ರಧಾನ ಕುಟುಂಬದ ಸಾಮಾಜಿಕ ವ್ಯವಸ್ಥೆ. ಸಂಪೂರ್ಣವಾಗಿ ಮೂರು ಸಾವಿರ ಮಂದಿ ಮಹಿಳೆಯರಿಂದಲೇ ನಡೆಸಲ್ಪಡುವ 'ಇಮಾ ಬಜಾರ್' ಇಂಫಾಲ ನಗರದ ಮಧ್ಯ ಭಾಗದಲ್ಲಿದೆ. 'ಇಮಾ' ಎಂದರೆ ತಾಯಿ ಎಂದರ್ಥ. ಕುಟುಂಬಗಳ ತಾಯಂದಿರು ಇಲ್ಲಿ ಬೆಳಿಗ್ಗೆ ಏಳಕ್ಕೆಲ್ಲ ಬಂದು ರಾತ್ರಿ ಏಳರವರೆಗೂ ವ್ಯಾಪಾರ ನಿರ್ವಹಿಸುತ್ತಾರೆ. ಗೃಹಕೃತ್ಯದ ವಸ್ತುಗಳು, ಬಟ್ಟೆ, ಕರಕುಶಲವಸ್ತುಗಳು, ಅಲಂಕಾರ ಸಾಮಗ್ರಿಗಳು – ಈ ಪೇಟೆಯಲ್ಲಿ ಏನುಂಟು, ಏನಿಲ್ಲ...

ಇಂಫಾಲದ ಕಾಂಗ್ಲಾ ಕೋಟೆ ರಾಜವಂಶದವರ ಆಳ್ವಿಕೆಗೆ ಸಂಬಂಧಿಸಿದ್ದು. ಇಲ್ಲಿ ರಾಜರ ಸಮಾಧಿಗಳಿವೆ, ಅವು ಸರಳವಾಗಿವೆ. ಇಲ್ಲಿರುವ ಕೊಂಬುಳ್ಳ ಎರಡು ಪ್ರಾಣಿಗಳ ಬೃಹತ್ ಶಿಲ್ಪವನ್ನು 'ಕಾಂಗ್ಲಾ–ಶಾ' ಎನ್ನುತ್ತಾರೆ. ಇದು ರಾಜರ ರಕ್ಷಕ ಮತ್ತು ಅಪಶಕುನ ನಿವಾರಕ ಎಂಬ ನಂಬಿಕೆಯನ್ನು ತಳಕು ಹಾಕಿಕೊಂಡಿದೆ. ಪ್ರಸ್ತುತ ಈ ಶಿಲ್ಪ ಕಲಾಕೃತಿ ಮಣಿಪುರದ ರಾಜ್ಯ ಲಾಂಛನವಾಗಿದೆ. ಮಣಿಪುರ ದೇವತೆಯ ದೇವಸ್ಥಾನ ಇಲ್ಲಿದೆ. ಕಾಂಗ್ಲಾ ಮ್ಯೂಸಿಯಂನಲ್ಲಿ ರಾಜರುಗಳ ಫೋಟೊಗಳು, ಆಯುಧಗಳು, ನಾಣ್ಯಗಳನ್ನು ಸಂರಕ್ಷಿಸಿಟ್ಟಿದ್ದಾರೆ. ಈ ಕಾಂಗ್ಲಾ ಕೋಟೆಯನ್ನು ಸುಂದರವಾದ ಜೈವಿಕ ಉದ್ಯಾನವನ ಸುತ್ತುವರೆದಿದೆ.

ಕಾಂಗ್ಲಾ ಕೋಟೆಯ ಪಕ್ಕದಲ್ಲಿ ಗೋವಿಂದಜಿ ಮಂದಿರವಿದೆ. ಈ ವೈಷ್ಣವ ಮಂದಿರ ಎರಡು ಸ್ವರ್ಣ ಲೇಪಿತ ಗುಮ್ಮಟಗಳು, ಎತ್ತರದ ಮಂಟಪ, ಗೋವಿಂದಜಿ – ಜಗನ್ನಾಥ ಬಲಭದ್ರರೆಂಬ ಮೂರು ವಿಭಾಗಗಳನ್ನು ಹೊಂದಿದ್ದು ವಿಶಾಲವಾಗಿದೆ. ದೇಗುಲದ ಆವರಣದಾಚೆ ವಿಶಾಲವಾದ ತುಂಬು ಕೊಳ, ಕೊಳದ ದಡದಲ್ಲಿ ಪುಟ್ಟಪುಟ್ಟ ಗುಡಿಗಳು, ಹೂವಿನಿಂದ ತೊನೆವ ಮರಗಳಿವೆ. ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಇಸ್ಕಾನ್ ಮಂದಿರ ಕೂಡ ಕಣ್ಸೆಳೆವ ವಾಸ್ತುಶೈಲಿಯಲ್ಲಿ ಸುಂದರ ಉದ್ಯಾನವನದಿಂದ ಕಂಗೊಳಿಸುತ್ತಾ ಪ್ರವಾಸಿಗರನ್ನು ಆಕರ್ಷಿಸುತ್ತದೆ.

### ನೇತಾಜಿ ನೆನಪುಗಳು

ಇಂಫಾಲದಿಂದ 55 ಕಿ.ಮೀ. ದೂರದ ಮೊಯಿರಾಂಗ್‌ನಲ್ಲಿ ನೇತಾಜಿ ಆಡಿಟೋರಿಯಂ, ಮ್ಯೂಸಿಯಂ ಮತ್ತು ಲೈಬ್ರರಿ ಇದೆ. ಸ್ವಾತಂತ್ರ್ಯ ಸಂಗ್ರಾಮದ ಅಪ್ರತಿಮ ಸೇನಾನಿ

## ವೀಸಾರಹಿತ ವಿದೇಶ ಪ್ರವಾಸ

ಮಣಿಪುರ ರಾಜ್ಯದಲ್ಲಿ ಪ್ರವಾಸ ಮಾಡುವವರಿಗೆ ಪಾಸ್‌ಪೋರ್ಟ್, ವೀಸಾಗಳ ಗೊಡವೆಯಿಲ್ಲದೆ ಒಂದು ದಿನದ ವಿದೇಶ ಪ್ರವಾಸದ ವಿಶೇಷ ಅನುಭವ ಅನಾಯಾಸವಾಗಿ ಕೈಗೂಡುತ್ತದೆ. ಅದು ಈ ರಾಜ್ಯದ ವಾಣಿಜ್ಯ ರಾಜಧಾನಿ ಎಂದೆನಿಸಿಕೊಳ್ಳುವ ಭಾರತದ ಈಶಾನ್ಯದ ತುಟ್ಟತುದಿಯ ನಗರ ಮೋರ್ಹೆ ಮೂಲಕ.

ಇಂಫಾಲದಿಂದ 75 ಕಿ.ಮೀ. ದೂರದ ಮೋರ್ಹೆವರೆಗೂ ಉತ್ತಮವಾದ ರಸ್ತೆ ಇದೆ. ಮೋರ್ಹೆಯಲ್ಲಿದೆ 'ಇಂಡೋ ಮ್ಯಾನ್ಮಾರ್ ಫ್ರೆಂಡ್ ಶಿಪ್ ಬ್ರಿಡ್ಜ್'. ಇಲ್ಲಿ ಪ್ರವಾಸಿಗಳು ತಮ್ಮ ಆಧಾರ್ ಕಾರ್ಡ್, ಗುರುತಿನ ಚೀಟಿ ತೋರಿಸಿ ಅನುಮತಿ ಪತ್ರ ಪಡೆದು ಸ್ನೇಹ ಸೇತುವೆಯನ್ನು ಕಾಲ್ನಡಿಗೆಯಲ್ಲೇ ದಾಟಿ ಬರ್ಮಾದ 'ತಮು' ನಗರದಲ್ಲಿ ಸಂಜೆಯವರೆಗೂ ಸುತ್ತಾಡಿ ಹಿಂದಿರುಗಬಹುದು. ಮಣಿಪುರದ ವರ್ತಕರು ಬೆಳಿಗ್ಗೆ ಅಲ್ಲಿಗೆ ಹೋಗಿ ಮ್ಯಾನ್ಮಾರಿನ ಕರೆನ್ಸಿ ಕ್ಯಾಟ್‌ನಲ್ಲಿ ಭಾರತದ ರೂಪಾಯಿಗೆ ಲಾಭದಾಯಕವಾಗಿ ಸಗಟು ವ್ಯಾಪಾರ ಮಾಡಿ ಸಂಜೆ ಹಿಂದಿರುಗುತ್ತಾರೆ. ಅಂತೆಯೇ ಮ್ಯಾನ್ಮಾರಿನ ವರ್ತಕರು ಕೂಡ ಮೋರ್ಹೆಗೆ ಬಂದು ವ್ಯಾಪಾರ ಮಾಡುತ್ತಾರೆ.